# ಕರ್ನಾಟಕ ವಿಧಾನ ಪರಿಷತ್ತು

***ಸೋಮವಾರ, 29ನೇ ಫೆಬ್ರವರಿ 2016***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಮಧ್ಯಾಹ್ನ 1 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಎಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

~~~~~~~~

**(ವಂದೇ ಮಾತರಂ ಗೀತೆಯೊಂದಿಗೆ ಸದನ ಪ್ರಾರಂಭವಾಯಿತು)**
~~~~~~~~

## ರಾಜ್ಯಪಾಲರ ಭಾಷಣದ ಮಂಡನೆ

**ಸಭಾಪತಿಯವರು:–** ಸನ್ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಕಾರ್ಯದರ್ಶಿಯವರು ಸಭೆಯ ಮುಂದಿಡುವುದು.

**ಕಾರ್ಯದರ್ಶಿ:–** ಮಾನ್ಯ ಸಭಾಪತಿಯವರೆ, ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಸಭೆಯ ಮುಂದಿಡುತ್ತೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

(ಕನ್ನಡ, ಆಂಗ್ಲ ಮತ್ತು ಹಿಂದಿ ಪ್ರತಿಗಳನ್ನು ಲಗತ್ತಿಸಲಾಗಿದೆ)

**ಸಭಾಪತಿಯವರು:-** ಗೌರವಾನ್ವಿತ ಸದಸ್ಯರುಗಳ ಗಮನಕ್ಕೆ ಎರಡು ವಿಷಯಗಳನ್ನು ತರಬಯಸುತ್ತೇನೆ. ಮೊದಲನೆಯದಾಗಿ, ನಮ್ಮ ಸದನಕ್ಕೆ 25 ಜನ ಹೊಸದಾಗಿ ಚುನಾಯಿತರಾಗಿ ಬಂದಿದ್ದಾರೆ. ಅವರಿಗೆ ಇದು ಮೊದಲನೆ ದಿವಸ. ನಾವು ಸ್ವಾಭಾವಿಕವಾಗಿ ಮೊದಲ ದಿವಸ ಅವರ ಪರಿಚಯ ಮಾಡಿಕೊಳ್ಳುವ ಪ್ರಯತ್ನ ಮಾಡಬೇಕಾಗಿತ್ತು. ಆದರೆ ಇವತ್ತು ರಾಜ್ಯಪಾಲರ ಭಾಷಣ ಮಾಡಿಸಿರುವುದರಿಂದ ಆ ಕಾರ್ಯಕ್ರಮವನ್ನು ನಾಳೆ ಮಾಡೋಣ. ಸ್ವಾಭಾವಿಕವಾಗಿ ಹೊಸದಾಗಿ ಚುನಾಯಿತರಾಗಿ ಬಂದವರು ಪಕ್ಷಗಳ ಹೆಸರಿನೊಳಗೆ ಚುನಾಯಿತರಾಗಿದ್ದಾರೆ. ಆಯಾಯ ಪಕ್ಷದ ಪ್ರಮುಖರು, ಸಭಾನಾಯಕರು, ವಿರೋಧ ಪಕ್ಷದ ನಾಯಕರು, ಅವರ ಪಕ್ಷದಿಂದ ಯಾರ್ಯಾರು ಗೆದ್ದು ಬಂದಿದ್ದಾರೆ ಅವರನ್ನು ಸದನಕ್ಕೆ ನಾಳೆ ಬೆಳಿಗ್ಗೆ ಸದನ ಪ್ರಾರಂಭವಾದ ತಕ್ಷಣ ಪರಿಚಯ ಮಾಡಿದರೆ ಒಳ್ಳೆಯದಾಗುತ್ತದೆ. ಯಾರು ಸ್ವತಂತ್ರವಾಗಿ ಗೆದ್ದು ಬಂದಿರುತ್ತಾರೆ ಅವರನ್ನು ನಾನೇ ಪರಿಚಯ ಮಾಡಿಕೊಡುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಎಲ್ಲರನ್ನು ತಾವೇ ಪರಿಚಯ ಮಾಡಿಕೊಡಿ.

**ಸಭಾಪತಿಯವರು:-** Agreed.

**ಶ್ರೀ ಅಶ್ವತ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ಇವತ್ತು ಕಲಾಪ ಇಲ್ಲದೇ ಇರುವುದರಿಂದ ಇವತ್ತೇ ಪರಿಚಯ ಮಾಡಿಕೊಟ್ಟರೆ ಒಳ್ಳೆಯದು.

**ಡಾ:ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ನೂತನವಾಗಿ ಚುನಾಯಿತರಾದ ಮೂರು ಜನ ವಿಧಾನಸಭಾ ಸದಸ್ಯರುಗಳು ಇವತ್ತಿನ ದಿನವೇ ಪ್ರಮಾಣ ವಚನ ಸ್ವೀಕರಿಸುತ್ತಿದ್ದಾರೆ.

**ಸಭಾಪತಿಯವರು:-** ಹೊಸದಾಗಿ ಆಯ್ಕೆಯಾಗಿ ಬಂದಂತಹ ಸದಸ್ಯರುಗಳಿಗೆ ನಾವು ಈಗಾಗಲೇ ಪ್ರಮಾಣ ವಚನ ಬೋಧಿಸಿದ್ದೇವೆ.

**ಡಾ:ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೇ, ಪ್ರಮಾಣ ವಚನ ಸ್ವೀಕರಿಸಿದ ಮೇಲೆ ಅವರ ಪರಿಚಯ ಮಾಡಿಕೊಡಬೇಕಾಗುತ್ತದೆ.

**ಸಭಾಪತಿಯವರು:-** ಈಗ ನನ್ನ ಹತ್ತಿರ ಹೊಸದಾಗಿ ಆಯ್ಕೆಯಾಗಿರುವಂತಹ 25 ಸದಸ್ಯರುಗಳ ವಿವರಗಳ ಪಟ್ಟಿ ಇಲ್ಲ. ನಾನು ಪಟ್ಟಿಯನ್ನು ತೆಗೆದುಕೊಂಡು ತಮ್ಮೆಲ್ಲರ ಅಭಿಪ್ರಾಯದಂತೆ ಸಭಾಪತಿಯಾಗಿ ನಾನೇ ಅವರ ಪರಿಚಯ ಮಾಡಿಸಿಕೊಡುತ್ತೇನೆ. ನಾಳೆ ಅದು ಮೊದಲ ಕಾರ್ಯಕ್ರಮ. ಅದಾದ ನಂತರ ಬೇರೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇನೆ. ಎರಡನೆಯದಾಗಿ, ಈಗಾಗಲೇ ಆಹ್ವಾನ ಪತ್ರಿಕೆಯನ್ನು ನಮ್ಮ ಕಾರ್ಯದರ್ಶಿಗಳು ನನ್ನ ಪರವಾಗಿ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿ ಕೊಟ್ಟಿದ್ದಾರೆ. ಆಹ್ವಾನ ಪತ್ರಿಕೆಯಲ್ಲಿ ಎರಡು ವಿಷಯಗಳಿವೆ. ಒಂದನೆಯದು, ಸದನವನ್ನು ಮುಂದೂಡಿದ ತಕ್ಷಣ ಮಧ್ಯಾಹ್ನ ಒಂದೂವರೆ ಗಂಟೆಗೆ ಮಾನ್ಯ ಸದಸ್ಯರುಗಳಿಗೆ ಭೋಜನ ವ್ಯವಸ್ಥೆಯನ್ನು ಮಾಡಲಾಗಿದೆ. ಒಂದೂವರೆಯಿಂದ ಮೂರು ಗಂಟೆಯೊಳಗೆ ಭೋಜನವನ್ನು ಮುಗಿಸಿಕೊಂಡು ಮಧ್ಯಾಹ್ನ ಮೂರು ಗಂಟೆಗೆ ಸರಿಯಾಗಿ ಸದನದ ಇದೇ ಜಾಗದಲ್ಲಿ **ಸದನದ ಕಾರ್ಯಕಲಾಪಗಳ ಕಾರ್ಯ ವಿಧಾನ ಕುರಿತು "ಚಿಂತನ-ಮಂಥನ"** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಹೊಸಬರಿಗೆ ಮಾತ್ರ "ಚಿಂತನ-ಮಂಥನ" ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಕೆಲವರ ಮನಸ್ಸಿನಲ್ಲಿದೆ. ಖಂಡಿತ ಅಲ್ಲ, ನನ್ನನ್ನು ಸೇರಿಸಿಕೊಂಡು ನಮ್ಮ ಸದನದ ಎಲ್ಲಾ ಗೌರವಾನ್ವಿತ ಸದಸ್ಯರುಗಳಿಗೂ ಎರಡು-ಮೂರು ಜನ ಸೇರಿಕೊಂಡು ಈ ಕಾರ್ಯಕ್ರಮವನ್ನು ಏರ್ಪಡಿಸುವ ಸಣ್ಣ ಪ್ರಯತ್ನವನ್ನು ಮಾಡಿದ್ದೇವೆ. ಅಂದರೆ, ವಿರೋಧ ಪಕ್ಷದ ನಾಯಕರು, ವಿರೋಧ ಪಕ್ಷದ ಮುಖ್ಯ ಸಚೇತಕರು, ಆಡಳಿತ ಪಕ್ಷದ ಮುಖ್ಯ ಸಚೇತಕರು, ಇತರ ಕೆಲವರನ್ನು ಕೂರಿಸಿಕೊಂಡು ಮಾತನಾಡಿ, ಚರ್ಚೆ ಮಾಡಿ ಒಂದು ಸಣ್ಣ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಮೂರು ಗಂಟೆಯಿಂದ ಐದುಕಾಲು ಗಂಟೆಯವರೆಗೆ ಎರಡು ಗಂಟೆಗಳ ಕಾರ್ಯಕ್ರಮ. ದಯಮಾಡಿ ಎಲ್ಲರೂ ತಪ್ಪದೆ ಭಾಗವಹಿಸಬೇಕೆನ್ನುವ ಆಸೆ ನನಗಿದೆ. ಹೊಸದಾಗಿ ಚುನಾಯಿತರಾದವರು, ಅದರಲ್ಲೂ ಮೊದಲ ಬಾರಿಗೆ ಈ ಸದನದ ಸದಸ್ಯರಾಗಿ ಚುನಾಯಿತರಾದವರಿಗೆ ಮಾತ್ರ ಈ ಕಾರ್ಯಕ್ರಮ, ಬೇರೆಯವರಿಗೆ ಇರುವುದಿಲ್ಲ ಎಂದು ಕೆಲವರು ಆಡಿಕೊಳ್ಳುತ್ತಿರುವ ಮಾತು ನನ್ನ ಗಮನಕ್ಕೆ

ಬಂದಿತು. ಅದಕ್ಕೆ ನಾನು ಹೇಳಿದೆ, ನಾನು, ಶ್ರೀ ಬಸವರಾಜ ಹೊರಟ್ಟಿಯವರು, ಶ್ರೀ ರಾಮಚಂದ್ರಗೌಡರು ಈ ಸದನಕ್ಕೆ 5-6 ಬಾರಿ ಗೆದ್ದು ಬಂದವರು, ನಮಗೂ ಸೇರಿ ಈ ಕಾರ್ಯಕ್ರಮವನ್ನು ಏರ್ಪಡಿಸಿದ್ದೇವೆ. ಪ್ರಮುಖವಾಗಿ ಮೂರು ಹೆಸರುಗಳನ್ನು ನಾನು ಬೇಕೆಂದೇ ಹೇಳಿದೆ. ಎಲ್ಲರಿಗೂ ಸೇರಿ ಈ ಕಾರ್ಯಕ್ರಮವನ್ನು ಏರ್ಪಡಿಸಿದ್ದೇವೆ. ದಯಮಾಡಿ ಎಲ್ಲರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ. ಅಕಸ್ಮಾತ್ ಆಗಿ ಈಗ ಯಾರಾದರೂ ಸದನಕ್ಕೆ ಬಂದಿಲ್ಲವೆಂದರೆ ಅವರನ್ನು ಬರುವುದಕ್ಕೆ ಹೇಳಿ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಚಿಂತನ-ಮಂಥನ ಕಾರ್ಯಕ್ರಮವನ್ನು ಮಾಡುವುದು ಸರಿಯಲ್ಲ.

**ಸಭಾಪತಿಯವರು:-** ಸದನ ಮುಂದೂಡಿದ ನಂತರ ಸದನದ ಒಳಗಡೆ ಕಾರ್ಯಕ್ರಮವನ್ನು ಮಾಡಬಹುದು.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಬೇರೆ ಕಡೆ ಮಾಡಿದರೆ ಒಳ್ಳೆಯದು.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ಬ್ಯಾಕ್ವೆಂಟ್ ಹಾಲ್‌ನಲ್ಲಿ ಅಥವಾ ಬೇರೆ ಕಡೆಯಲ್ಲಿ ಮಾಡಬಹುದು, ಇಲ್ಲಿ ಪಾಠ ಮಾಡುವುದು ಸರಿಯಲ್ಲ.

**ಸಭಾಪತಿಯವರು:-** ಈ ಕಾರ್ಯಕ್ರಮವನ್ನು ಬೇರೆ ಕಡೆ ಮಾಡಬೇಕೆಂದಾಗ ನಮ್ಮ ರಾಜ್ಯದಲ್ಲಿ ಸೀನಿಯರ್ಸ್ ಎಂದು ಯಾರಿದ್ದಾರೆ ಅವರ ಜೊತೆ ಸಮಾಲೋಚನೆ ಮಾಡಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಇದು ಹೊಸ precedent ಆಗುತ್ತದೆ.

**ಸಭಾಪತಿಯವರು:-** ಹೊಸ precedent ಅಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:-** ನಮ್ಮ ಇತಿಹಾಸದಲ್ಲಿ ಯಾವತ್ತೂ ನಡೆದಿಲ್ಲ.

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೇ, ನಮ್ಮ ಸದನಕ್ಕೆ ನೂರು ವರ್ಷ ತುಂಬಿದಾಗ ಅದರ ಆಚರಣೆಯನ್ನು ಇದೇ ಸದನದಲ್ಲಿ ಮಾಡಿದ್ದೇವೆ. ಅಂದಿನ ರಾಷ್ಟ್ರಾಧ್ಯಕ್ಷರಾಗಿದ್ದ ಶ್ರೀ ಅಬ್ದುಲ್ ಕಲಾಂ ಅವರಿಂದ ಈ ಸದನದಲ್ಲಿ ಭಾಷಣ ಮಾಡಿಸಿದ್ದೇವೆ. ಬೇರೆ ಬೇರೆ ಸಂದರ್ಭದಲ್ಲಿಯೂ ಬೇರೆ ಬೇರೆ ಕಾರ್ಯಕ್ರಮಗಳು ನಡೆದಿವೆ. ನಾನು ಬಹಳ ಜನ ಹಿರಿಯರ ಜೊತೆಯಲ್ಲಿ ಚರ್ಚೆ ಮಾಡಿ, ಈ ಸದನದೊಳಗೆ ಕಾರ್ಯಕ್ರಮವನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದೇನೆ. ದಯಮಾಡಿ ಅದರ ಬಗ್ಗೆ ಪ್ರಶ್ನೆ ಬೇಡ. ಬಂದು ನಮ್ಮ ನಮ್ಮ ಜಾಗದಲ್ಲಿ ನಾವು ಕುಳಿತುಕೊಳ್ಳೋಣ. ಕಾರ್ಯಕ್ರಮವನ್ನು ನಡೆಸೋಣ.

**ಡಾ:ಮತ್ತಿಕಟ್ಟಿ ವೀರಣ್ಣ:-** ಈ ಸದನದೊಳಗೆ ರಾಷ್ಟ್ರಪತಿಗಳು, ರಾಜ್ಯಪಾಲರು ಅಡ್ರೆಸ್ ಮಾಡುವುದು ಬೇರೆ.

**ಸಭಾಪತಿಯವರು:-** ಸದನ ಮುಂದೂಡಿದ ನಂತರ ಮಾಡುತ್ತಿದ್ದೇವೆ.

**ಡಾ:ಮತ್ತಿಕಟ್ಟಿ ವೀರಣ್ಣ:-** ಇದನ್ನು ನೀವು ಮಾಡಲೇಬೇಕಾದರೆ ಸಮ್ಮೇಳನ ಸಭಾಂಗಣದಲ್ಲಿ ಮಾಡಿ.

**ಸಭಾಪತಿಯವರು:-** ಇದರ ಬಗ್ಗೆ ಚರ್ಚೆ ಮಾಡಿ ತೀರ್ಮಾನ ಮಾಡಿದ್ದೇವೆ. ಇದನ್ನು ಬದಲಾವಣೆ ಮಾಡಬೇಡಿ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** Celebration ಮಾಡಬಹುದೇ ಹೊರತು ಇಲ್ಲಿ ಪಾಠ ಮಾಡುವುದಕ್ಕೆ ಬರುವುದಿಲ್ಲ. ಹೊರಗಡೆ ಮಾಡಬೇಕು. ದಯಮಾಡಿ ಇದನ್ನು ಕನ್ಸಿಡರ್ ಮಾಡಿ.

**ಸಭಾಪತಿಯವರು:-** ಈಗ ತಮ್ಮೆಲ್ಲರ ಅಭಿಪ್ರಾಯವನ್ನು ನಾನು ತೆಗೆದುಕೊಂಡಿದ್ದೇನೆ. ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಚರ್ಚೆ ಎಲ್ಲಿ ನಡೆಯಿತು? ಇದೇ ಸದನದಲ್ಲಿ ನಡೆಯಿತು. ಈ ತರಹ ಸಾಕಷ್ಟು ಸಲ ಕಾರ್ಯಕ್ರಮಗಳನ್ನು ನಡೆಸಿದ್ದೇವೆ. ಇದರ ಬಗ್ಗೆ ಚರ್ಚೆ ಮಾಡಿದ್ದೇನೆ. ದೊಡ್ಡ ದೊಡ್ಡವರ ಅಭಿಪ್ರಾಯ ತೆಗೆದುಕೊಂಡಿದ್ದೇನೆ. ಇದರಲ್ಲೇನು ಚರ್ಚೆ ಇರುವುದಿಲ್ಲ. ಒಂದು ರೀತಿ ಒಟ್ಟಿಗೆ ಕುಳಿತುಕೊಂಡು ಮಾತನಾಡುವುದು ಇರುತ್ತದೆ. ಆದ್ದರಿಂದ ನಾವು ನಡೆಸುತ್ತೇವೆ. ಈಗ ಆ ಕಾರ್ಯಕ್ರಮಕ್ಕೆ ತಾವೆಲ್ಲರೂ ಭಾಗವಹಿಸಬೇಕೆಂದು ವಿನಂತಿಸುತ್ತೇನೆ. ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಮಧ್ಯಾಹ್ನ 1 ಗಂಟೆ 38 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 1ನೇ ಮಾರ್ಚ್ 2016ರ ಮಂಗಳವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**